ತುಂಗಭದ್ರಾ ಜಲಾಶಯದಲ್ಲಿನ ನೀರಿನ ಸಂಗ್ರಹ

142 (1857) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಭದ್ರಾ ಜಲಾಶಯದ ನೀರಿನ ಸಂಗ್ರಹಣಾ ಪ್ರಮಾಣ ಎಷ್ಟು : ಎಷ್ಟು ಟಿ.ಎಂ.ಸಿ. ನೀರು ಸಂಗ್ರಹಣೆಯಾಗುತ್ತಿದೆ; ಎಷ್ಟು ಎಕರೆ ಪ್ರದೇಶದಲ್ಲಿ ನೀರಾವರಿಯಾಗಿದೆ.

ಆ) ಕಳೆದ ಹಲವಾರು ವರ್ಷಗಳಿಂದ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ರೈತರಿಗೆ ನೂರಾರು ಕೋಟಿ ನಷ್ಟವಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಹೆಚ್.ಕೆ ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ತುಂಗಭದ್ರಾ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯವು ಜಲಾಶಯದ ಪ್ರಾರಂಭದ ಹಂತದಲ್ಲಿ 133 ಟಿ.ಎಂ.ಸಿ. ಯಷ್ಟಿತ್ತು. 1993ನೇ ವರ್ಷದಲ್ಲಿ ನಡೆಸಿದ ಹೈಡ್ರೋಗ್ರಾಫಿಕ್ ಸರ್ವೆ ಪ್ರಕಾರ ತುಂಗಭದ್ರಾ ಜಲಾಶಯದ ಸಂಗ್ರಹಣಾ ಸಾಮರ್ಥ್ಯವು 111.507 ಟಿ.ಎಂ.ಸಿ. ಯಷ್ಟು ಇರುತ್ತದೆ. ಮತ್ತು ಪ್ರತಿ ವರ್ಷ 0.424 ಟಿ.ಎಂ.ಸಿ. ಯಷ್ಟು ಹೂಳು ಸಂಗ್ರಹಣವಾಗುತ್ತಿದೆ.

ಆಯಾ ವರ್ಷದಲ್ಲಿ ಜಲಾನಯನ ಪ್ರದೇಶದಲ್ಲಿ ಬೀಳುವ ಮಳೆಯನ್ನಾಧರಿಸಿ ನೀರು ಸಂಗ್ರಹವಾಗುತ್ತದೆ. (ಸರಾಸರಿ ಸುಮಾರು 170 ರಿಂದ 175 ಟಿ.ಎಂ.ಸಿ) ಆದರೆ ಈ ವರ್ಷದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು 144 ಟಿ.ಎಂ.ಸಿ. ಯಷ್ಟು ಮಾತ್ರ ನೀರು ಸಂಗ್ರಹಣೆಯಾಗಿರುತ್ತದೆ.

ತುಂಗಭದ್ರಾ ಜಲಾಶಯದಿಂದ ಒಟ್ಟು 8,73,615 ಎಕರೆಯಷ್ಟು ಪ್ರದೇಶಕ್ಕೆ ನೀರಾವರಿಯಾಗಿದೆ.

ಆ) ಇಲ್ಲ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೇ, ತುಂಗಾಭದ್ರಾ ಜಲಾಶಯದಲ್ಲಿ ನೀರಿನ ಸಂಗ್ರಹಣೆ ಕಡಿಮೆಯಾಗಿ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯಲ್ಲಿರುವ ರೈತರಿಗೆ ತೊಂದರೆಯಾಗಿದೆ. ಸುಮಾರು ಒಂಬತ್ತು ಲಕ್ಷ ಎಕರೆಗೂ ಮೇಲ್ಪಟ್ಟು ಇವತ್ತು ಭತ್ತವನ್ನು ಮತ್ತು ಬೇರೆ ಬೇರೆ ಬೆಳೆಗಳನ್ನು ಆ ಭಾಗದ ರೈತರು ಬೆಳೆದಿದ್ದಾರೆ. ಇವತ್ತು ಇನ್ನೊಂದು ವಾರ, ಹದಿನೈದು ದಿವಸದವರೆಗೂ ಅಂದರೆ ಏಪ್ರಿಲ್ ಹತ್ತರವರೆಗಾದರೂ ಅಲ್ಲಿ ನೀರಿನ ಅವಶ್ಯಕತೆ ಬಹಳ ಇದೆ. ಆದರೆ ಉತ್ತರದಲ್ಲಿ; ಕಳೆದ ಹಲವಾರು ವರ್ಷಗಳಿಂದ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ರೈತರಿಗೆ ನೂರಾರು ಕೋಟಿ ನಷ್ಟವಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?" ಎಂದಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಆದರೆ ಆ ವರ್ಷ ನೀರಿನ ಸಂಗ್ರಹಣ ತುಂಗಾಭದ್ರಾ ಜಲಾಶಯದಲ್ಲಿ ಕಡಿಮೆಯಾಗಿರುವುದರಿಂದ ಅನೇಕ ರೈತರ ಹೋರಾಟಗಳು ನಮ್ಮ ರಾಯಚೂರು ಜಿಲ್ಲೆಯಲ್ಲಿ ಪ್ರಾರಂಭವಾಗಿವೆ. ಇವತ್ತು ಉತ್ತರದಲ್ಲಿ ನೀರಿನ ಕೊರತೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದೇ ಇಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಭಾರೀ ನೀರಾವರಿ ಸಚಿವರಲ್ಲಿ ನಾನು ಒತ್ತಾಯ ಪಡಿಸುವುದಿಷ್ಟೆ. ಇವತ್ತು ತುಂಗಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ ಬರುವ

ಬಳ್ಳಾರಿ, ರಾಯಚೂರು ಜಿಲ್ಲೆಯಲ್ಲಿ ನೀರನ್ನು ಒದಗಿಸದಿದ್ದರೆ ಸುಮಾರು ಮೂರು ನೂರು ಕೋಟಿಗೂ ಮೇಲ್ಪಟ್ಟು ರೈತರಿಗೆ ನಷ್ಟವಾಗುತ್ತದೆ. ಈ ನಷ್ಟವನ್ನು ತುಂಬಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ರೈತರು ಬೆಳದ ಬೆಳೆಗಳು ಬರಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದರೆ, ಭದ್ರಾ ಜಲಾಶಯದಲ್ಲಿ ಸುಮಾರು 4 ರಿಂದ 5 ಟಿಎಂಸಿ ನೀರು ಇದೆ. ಆ ನೀರನ್ನು ತುಂಗಭದ್ರಾ ಜಲಾಶಯಕ್ಕೆ ಬಿಡಿಸಿ ಕೊಟ್ಟು ಆ ಭಾಗದ ರೈತರ ಒಂದು ಸಮಸ್ಯೆ ಏನು ಇದೆ. ಆ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಬಾರೀ ನೀರಾವರಿ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಇವತ್ತು ತುಂಗಭದ್ರಾ ಜಲಾಶಯದಲ್ಲಿ ಸುಮಾರು 30 ಟಿಎಂಸಿಯಷ್ಟು ಹೂಳು ತುಂಬಿದೆ. ಆ ಹೂಳು ತೆಗೆಯುವ ಬಗ್ಗೆ ಪರ್ಯಾಯವಾಗಿ ಸರ್ಕಾರವೇನಾದರೂ ಯೋಜನೆಗಳನ್ನು ರೂಪಿಸಿದ್ದರೆ ದಯವಿಟ್ಟು ಅದನ್ನು ಯಾವ ವರ್ಷ ಪ್ರಾರಂಭ ಮಾಡುತ್ತೀರಿ, ಅದಕ್ಕೆಷ್ಟು ಹಣ ಬೇಕಾಗುತ್ತದೆ. ಅದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ ಎನ್ನುವುದನ್ನು ಮಾನ್ಯ ಭಾರಿ ನೀರಾವರಿ ಸಚಿವರು ಇದರ ಬಗ್ಗೆ ಉತ್ತರ ನೀಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಜಲಾಶಯದ ಸಾಮರ್ಥ್ಯ 135 ಟಿಎಂಸಿ ಎಂದು ಹೇಳಿ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅಲ್ಲಿ ಸಿಲ್ಟ್ ಅರೆಸ್ಟ್ ಆದ : ಮೇಲೆ 111 ಟಿಎಂಸಿ ನೀರು ನಿಂತಿದೆ ಎಂದು ಹೇಳಿದ್ದಾರೆ. ಈಗ 144 ಟಿಎಂಸಿ ಇದೆ ಎಂದು ಹೇಳಿದ್ದಾರೆ. ಆದರೆ ಮಾನ್ಯ ಹಂಪನಗೌಡರು ಎತ್ತಿದ ಪ್ರಶ್ನೆಗೆ ಆ ಪ್ರಾಜೆಕ್ಟ್‌ನಿಂದ ಸುಮಾರು ಎಂಟು ಲಕ್ಷಕ್ಕೂ ಹೆಚ್ಚು ಎಕರೆ ಜಮೀನಿಗೆ ನೀರಾವರಿಯಾಗುತ್ತದೆ ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ 144 ಟಿಎಂಸಿ ನೀರಿನ ಸಾಮರ್ಥ್ಯವಿದ್ದಾಗಲೂ ಕೂಡ ಈ ತುಂಗಭದ್ರಾ ಎಡ ಮತ್ತು ಬಲದಂಡೆ ಆಚ್ಚುಕಟ್ಟುದಾರರಿಗೆ ನೀರಿನ ಕೊರತೆ ಏಕಾಯಿತು ಎನ್ನುವುದನ್ನು ತಾವು ಉತ್ತರದಲ್ಲಿ ಹೇಳಬೇಕಾಗುತ್ತದೆ. ಇವರೇನು ಎಕ್ಸ್‌ಸ್ ಆಗಿ ಲೋಕಲೈಜ್ ಮಾಡಿಕೊಂಡಿದ್ದಾರೋ ಅಥವಾ ನೀರೇನಾದರೂ ಹೆಚ್ಚುವರಿಯಾಗಿ ನದಿ ಮೂಲಕ ಅದು ಹರಿದುಹೋಗಿದೆಯೋ? ಇದರ ಬಗ್ಗೆ ಬಹಳ ನಿಖರವಾಗಿ ಉತ್ತರ ಬೇಕಾಗುತ್ತದೆ. ಏಕೆಂದರೆ ಮಾನ್ಯ ಹಂಪನಗೌಡರು ಹೇಳಿದಂತೆ ಇವತ್ತು ರೈತರು ನೂರಾರು ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಾರೆ. ಇವತ್ತು ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಇಡೀ ಮೂರು ಜಿಲ್ಲೆಗಳಲ್ಲೂ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಈಗ ತಾಂತ್ರಿಕ ವರದಿ ಏನು ಇದೆ, ಮತ್ತು ನಿಮ್ಮ ವರದಿ ಏನು ಇದೆ, ಇದು ಸುಳ್ಳೋ ಹೇಗೆ ಎಂದು ತಾವು ಸ್ಪಷ್ಟಪಡಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಮಾನ್ಯ ಹಂಪನಗೌಡರು ಎತ್ತಿದಂಥ ಪ್ರಶ್ನೆ ಯೋಗ್ಯ ಇದೆ. ಏಕೆಂದರೆ ಏನಾದರೂ ಮಾಡಿ ಆ ಹೊಳೆಗೆ ನೀರನ್ನು ಬಿಟ್ಟು ಆ ಪೀಕನ್ನು ಬದುಕಿಸಬೇಕಾಗುತ್ತದೆ. ಅದಕ್ಕೂ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಇಲ್ಲಿ ಇನ್ನೊಂದು ವರದಿ ಪ್ರಕಾರ ಪ್ರತಿ ವರ್ಷ ಸುಮಾರು 45 ದಿವಸ ನೂರು ಟಿಎಂಸಿ ನೀರು ಅಧಿಕವಾಗಿ ಹರಿದುಹೋಗುತ್ತದೆ ಎನ್ನುವ ವರದಿ ಸಿಕ್ಕಿದೆ. ಅದು ಸರಿಯೇ ಎನ್ನುವುದು ಪ್ರಶ್ನೆ. ಆ ನಂತರ ನೂರು ದಿವಸ ಎನ್ನುವುದು ಪ್ರಶ್ನೆ. ಆ ನಂತರ ನೂರು ದಿವಸ ಹರಿದು ಹೋಗತಕ್ಕ ನೀರಿಗೆ ತಾವು ಬೇರೆ ಬೇರೆ ಯೋಜನೆಗಳನ್ನು ಮಾಡಬೇಕು ಎಂದು

ಮಾಡಿದ್ದೀರಿ. ಅದು ಇದರಲ್ಲಿ ಕಾಣುತ್ತದೆ. ಅದರಲ್ಲೂ ಸಿಂಗಟಾಲೂರು ಯೋಜನೆ ಕೂಡ ಮಾಡಬೇಕೆಂದು ತಾವು ಮಾಡಿದ್ದೀರಿ. ಅದು 18 ಟಿಎಂಸಿ ನೀರಿನದು. ಈಗೇನೋ ಕೆ.ಸಿ.ರೆಡ್ಡಿ ಯವರ ವರದಿ ಬಂದು ಆ ಯೋಜನೆಯೇ ನಿಲ್ಲುತ್ತದೆ ಎಂದು ಜನರಲ್ಲಿ ಹಾಹಾಕಾರ ನಡೆದಿದೆ. ಅದರ ಬಗ್ಗೆ ಕೂಡ ತಾವು ಉತ್ತರವನ್ನು ಹೇಳಬೇಕು. ಇನ್ನು ಅಚ್ಚುಕಟ್ಟು ಪ್ರದೇಶದಲ್ಲಿ ಹೆಚ್ಚಿಗೆ ಬಿತ್ತುತ್ತಾರೆ, ಒಂದು ಲಕ್ಷ ಇದ್ದರೆ, ಎರಡು ಎಕರೆ ಬಿತ್ತುತ್ತಾರೆ ಎಂದು ವದಂತಿ ಇದೆ; ಅದು ಸರಿಯೇ? ಬೆಳೆಯನ್ನು ಬಿತ್ತುತ್ತಾರೋ ಹೇಗೆ ಎನ್ನುವ ಬಗ್ಗೆ ಕೂಡ ತಾವು ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸುಮಾರು ಎಂಟು ಲಕ್ಷ ಎಕರೆ ಜಮೀನಿನಲ್ಲಿ ಭತ್ತವನ್ನು ಬೆಳೆದಿದ್ದಾರೆ ಎಂದು ಅವರೇ ಲಿಖಿತ ಮೂಲಕ ಒಪ್ಪಿಕೊಂಡಿದ್ದಾರೆ. ಈಗ ಆ ಕನಿಷ್ಟ 10 ರಿಂದ 12 ದಿವಸದವರೆಗೂ ನೀರು ಬೇಕಾಗಿದೆ. ಇವತ್ತು ನಮ್ಮ ತುಂಗಭದ್ರಾ ಜಲಾಶಯದಲ್ಲಿ ನೀರು ಕಡಿಮೆಯಾಗಿದೆ. ಅದು ಕೂಡ ಮಾನ್ಯ ಮಂತ್ರಿಗಳ ಗಮನದಲ್ಲಿದೆ. ಇವತ್ತು ಭದ್ರಾ ಜಲಾಶಯದಲ್ಲಿ ಸುಮಾರು 14 ರಿಂದ 18 ಟಿಎಂಸಿ ವರೆಗೂ ನೀರು ಇದೆ. ಇವತ್ತು ಏನಾದರೂ ಆ ಭಾಗದಿಂದ ನೀರನ್ನು ತೆಗೆದುಕೊಳ್ಳಬೇಕೆಂದರೆ ಆ ಭಾಗದ ರೈತರಿಗೆ ಒಂದು ಸಂಶಯ ಇದೆ. ಆ ನೀರನ್ನು ಬಿಟ್ಟರೆ ಆ ಭಾಗದ ರೈತರಿಗೆ ಅನಾನುಕೂಲವಾಗಬಹುದು ಎನ್ನುವ ಪ್ರಶ್ನೆ ಆ ಭಾಗದವರಿಗೆ ಉದ್ಭವಿಸಿದೆ. ಆ ಭಾಗದ ರೈತರಿಗೆ ನಾವು ಕ್ಲಿಯರ್ ಆಗಿ ಮೆಸ್ಸೇಜ್‌ನ್ನು ಕೊಡಬೇಕು. ಒಂದು ವೇಳೆ ಮೇ ಅಥವಾ ಜೂನ್ ತಿಂಗಳಲ್ಲಿ ಮಳೆ ಯಾಗದಿದ್ದರೆ ಅಲ್ಲಿ ಯಾವತ್ತೂ 15 ಟಿಎಂಸಿ ನೀರು ಆ ಜಲಾಶಯದಲ್ಲಿರುತ್ತದೆ. ಪಂಪ್ ಮೂಲಕ ಸರಬರಾಜು ಮಾಡಿದರೂ ಆ ಭಾಗದ ರೈತರನ್ನು ಉಳಿಸುವ ಅವಕಾಶ ಇರುತ್ತದೆ. ಅದರೆ ಈಗ ಏನು ಸುಮಾರು ಎಂಟು ಲಕ್ಷ ಎಕರೆ ಜಮೀನಿನಲ್ಲಿ ಬೆಳೆ ಇದೆ. ಅದಕ್ಕೆ ಸುಮಾರು ಎರಡು-ಮೂರು ಟಿಎಂಸಿಯಷ್ಟು ನೀರನ್ನು ಬಿಟ್ಟರೆ ಸುಮಾರು ಎಂಟು ಲಕ್ಷ ಎಕರೆಯ ಫಲ ಉಳಿಯುತ್ತದೆ. ಇಲ್ಲದಿದ್ದರೆ ನೂರಾರು ಕೋಟಿ ರೂಪಾಯಿಗಳ ಬೆಳೆ ನಷ್ಟವಾಗುತ್ತದೆ. ವಿಶೇಷವಾಗಿ ಇದಕ್ಕೆ ಮಾನ್ಯ ಮಂತ್ರಿಗಳು ಬಹಳ ಆದ್ಯತೆ ಮೇಲೆ ನೀರನ್ನು ಬಿಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ಶಂಕರ್ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ನಮ್ಮ ಎಸ್.ಎಸ್. ಪಾಟೀಲರು ಹೇಳಿದಂತೆ ಮುಂದೆ ನಾವು ಸಿಂಗಟಾಲೂರು ಅದು ಇದು ಮಾತನಾಡುವುದಕ್ಕಿಂತಲೂ ಇವತ್ತು ರೈತರು ಅಲ್ಲಿ ಸಾಯುತ್ತಿದ್ದಾರೆ. ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ ಮುಖ್ಯವಾಗಿ ಎಲ್‌ಎಲ್‌ಸಿ ಕೆನಾಲ್‌ನ್ನು 20 ನೇ ತಾರೀಖು ಬಂದ್ ಮಾಡುತ್ತಿದ್ದಾರೆ. ಇವತ್ತು ಅಥವಾ ನಾಳೆ ನಾವೇನಾದರೂ ನೀರನ್ನು ಆ ಕಾಲುವೆಗೆ ಬಿಡದಿದ್ದರೆ ಮುಂದಿನ ದಿನಗಳಲ್ಲಿ ಬಿಟ್ಟರೂ ಕೂಡ ಏನೂ ಪ್ರಯೋಜನವಿಲ್ಲ. ದಯ ಮಾಡಿ ಏನಾದರೂ ಸರ್ಕಾರ ಮಾಡುವುದಿದ್ದರೆ ಇವತ್ತು ಆ ಎಲ್‌ಎಲ್‌ಸಿ ಕಾಲುವೆಗೆ ನೀರನ್ನು ಬಿಟ್ಟರೆ ಮಾತ್ರ ಆ ಪೈರುಗಳು ಬದುಕುತ್ತವೆ. ಇವರೇನು ಎಕ್ಸ್‌ಸ್ ಆಗಿ ಲೋಕಲೈಜ್ ಮಾಡಿಕೊಂಡಿದ್ದಾರೋ ಅಥವಾ ನೀರೇನಾದರೂ ಹೆಚ್ಚುವರಿಯಾಗಿ ನದಿ ಮೂಲಕ ಅದು ಹರಿದು ಹೋಗಿದೆಯೋ? ಇದರ ಬಗ್ಗೆ ಬಹಳ ನಿಖರವಾಗಿ ಉತ್ತರ ಬೇಕಾಗುತ್ತದೆ. ಏಕೆಂದರೆ ಮಾನ್ಯ ಹಂಪನಗೌಡರು ಹೇಳಿದಂತೆ ಇವತ್ತು ರೈತರು ನೂರಾರು ಕೋಟಿ ರೂಪಾಯಿಗಳ

ನಷ್ಟವನ್ನು ಅನುಭವಿಸುತ್ತಾರೆ. ಇವತ್ತು ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಇಡೀ ಮೂರು ಜಿಲ್ಲೆಗಳಲ್ಲೂ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಈಗ ತಾಂತ್ರಿಕ ವರದಿ ಏನು ಇದೆ, ಮತ್ತು ನಿಮ್ಮ ವರದಿ ಏನು ಇದೆ, ಇದು ಸುಳ್ಳೋ ಹೇಗೆ ಎಂದು ತಾವು ಸ್ಪಷ್ಟಪಡಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಮಾನ್ಯ ಹಂಪನಗೌಡರು ಎತ್ತಿದಂಥ ಪ್ರಶ್ನೆ ಯೋಗ್ಯ ಇದೆ. ಏಕೆಂದರೆ ಏನಾದರೂ ಮಾಡಿ ಆ ಹೊಳೆಗೆ ನೀರನ್ನು ಬಿಟ್ಟು ಆ ಪೀಕನ್ನು ಬದುಕಿಸಬೇಕಾಗುತ್ತದೆ. ಅದಕ್ಕೂ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಇಲ್ಲಿ ಇನ್ನೊಂದು ವರದಿ ಪ್ರಕಾರ ಪ್ರತಿ ವರ್ಷ ಸುಮಾರು 45 ದಿವಸ ನೂರು ಟಿಎಂಸಿ ನೀರು ಅಧಿಕವಾಗಿ ಹರಿದುಹೋಗುತ್ತದೆ ಎನ್ನುವ ವರದಿ ಸಿಕ್ಕಿದೆ. ಅದು ಸರಿಯೇ ಎನ್ನುವುದು ಪ್ರಶ್ನೆ. ಆ ನಂತರ ನೂರು ದಿವಸ ಹರಿದು ಹೋಗತಕ್ಕ ನೀರಿಗೆ ತಾವು ಬೇರೆ ಬೇರೆ ಯೋಜನೆಗಳನ್ನು ಮಾಡಬೇಕು ಎಂದು ಮಾಡಿದ್ದೀರಿ. ಅದು ಇದರಲ್ಲಿ ಕಾಣುತ್ತದೆ. ಅದರಲ್ಲೂ ಸಿಂಗಟಾಲೂರು ಯೋಜನೆ ಕೂಡ ಮಾಡಬೇಕೆಂದು ತಾವು ಮಾಡಿದ್ದೀರಿ. ಅದು 18 ಟಿಎಂಸಿ ನೀರಿನದು. ಈಗೇನೋ ಕೆ.ಸಿ.ರೆಡ್ಡಿ ಯವರ ವರದಿ ಬಂದು ಆ ಯೋಜನೆಯೇ ನಿಲ್ಲುತ್ತದೆ ಎಂದು ಜನರಲ್ಲಿ ಹಾಹಾಕಾರ ನಡೆದಿದೆ. ಅದರ ಬಗ್ಗೆ ಕೂಡ ತಾವು ಉತ್ತರವನ್ನು ಹೇಳಬೇಕು. ಇನ್ನು ಅಚ್ಚುಕಟ್ಟು ಪ್ರದೇಶದಲ್ಲಿ ಹೆಚ್ಚಿಗೆ ಬಿತ್ತುತ್ತಾರೆ, ಒಂದು ಲಕ್ಷ ಇದ್ದರೆ, ಎರಡು ಲಕ್ಷ ಎಕರೆ ಬಿತ್ತುತ್ತಾರೆ ಎಂದು ವದಂತಿ ಇದೆ; ಅದು ಸರಿಯೇ? ಬೆಳೆಯನ್ನು ಬಿತ್ತುತ್ತಾರೋ ಹೇಗೆ ಎನುವುದನ್ನು ಕೂಡ ತಾವು ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸುಮಾರು ಎಂಟು ಲಕ್ಷ ಎಕರೆ ಜಮೀನಿನಲ್ಲಿ ಭತ್ತವನ್ನು ಬೆಳೆದಿದ್ದಾರೆ ಎಂದು ಅವರೇ ಲಿಖಿತ ಮೂಲಕ ಒಪ್ಪಿಕೊಂಡಿದ್ದಾರೆ. ಈಗ ಆ ಬೆಳೆಗೆ ಕನಿಷ್ಟ 10 ರಿಂದ 12 ದಿವಸದವರೆಗೂ ನೀರು ಬೇಕಾಗಿದೆ. ಇವತ್ತು ನಮ್ಮ ತುಂಗಭದ್ರಾ ಜಲಾಶಯದಲ್ಲಿ ನೀರು ಕಡಿಮೆಯಾಗಿದೆ. ಅದು ಕೂಡ ಮಾನ್ಯ ಮಂತ್ರಿಗಳ ಗಮನದಲ್ಲಿದೆ. ಇವತ್ತು ಭದ್ರಾ ಜಲಾಶಯದಲ್ಲಿ ಸುಮಾರು 14 ರಿಂದ 18 ಟಿಎಂಸಿವರೆಗೂ ನೀರು ಇದೆ. ಇವತ್ತು ಏನಾದರೂ ಆ ಭಾಗದಿಂದ ನೀರನ್ನು ತೆಗೆದುಕೊಳ್ಳಬೇಕೆಂದರೆ ಆ ಭಾಗದ ರೈತರಿಗೆ ಒಂದು ಸಂಶಯ ಇದೆ. ಆ ನೀರನ್ನು ಬಿಟ್ಟರೆ ಆ ಭಾಗದ ರೈತರಿಗೆ ಅನಾನುಕೂಲವಾಗಬಹುದು ಎನ್ನುವ ಪ್ರಶ್ನೆ ಆ ಭಾಗದವರಿಗೆ ಉದ್ಭವಿಸಿದೆ. ಆ ಭಾಗದ ರೈತರಿಗೆ ನಾವು ಕ್ಲಿಯರ್ ಆಗಿ ಮೆಸ್ಸೇಜನ್ನು ಕೊಡಬೇಕು. ಒಂದು ವೇಳೆ ಮೇ ಅಥವಾ ಜೂನ್ ತಿಂಗಳಲ್ಲಿ ಮಳೆಯಾಗದಿದ್ದರೆ ಅಲ್ಲಿ ಯಾವತ್ತೂ 15 ಟಿಎಂಸಿ ನೀರು ಆ ಜಲಾಶಯದಲ್ಲಿರುತ್ತದೆ. ಪಂಪ್ ಮೂಲಕ ಸರಬರಾಜು ಮಾಡಿದರೂ ಆ ಭಾಗದ ರೈತರನ್ನು ಉಳಿಸುವ ಅವಕಾಶ ಇರುತ್ತದೆ. ಕೇವಲ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 200 ಕೋಟಿ ರೂಪಾಯಿ ನಷ್ಟ ಆಗುತ್ತದೆ. ಆದಕಾರಣ ಈ ಸರ್ಕಾರದವರು ನಮ್ಮ ಕೆಪಿಸಿಸಿ ಅಧ್ಯಕ್ಷರು ಹೇಳಿದಂತೆ ಮುಂದೆ ಬರತಕ್ಕಂಥ ದಿನಗಳಲ್ಲಿ ನಮಗೆ ಮಳೆ ಬಾರದೇ ಇದ್ದರೆ ಏನಾದರೂ ಪಂಪ್ ಮೂಲಕ ನೀರನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬಹುದಾಗಿದೆ. ಆದರೆ ಇವತ್ತಿನ ದಿವಸ ನೀರಿಲ್ಲದೆ ಸಾಯತಕ್ಕ ರೈತರಿಗೆ ನೀರು ಕೊಡಬೇಕು ಎಂದು ನಾನು ಸರ್ಕಾರದಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ :- ತುಂಗಭದ್ರಾ ಜಲಾಶಯದ ನೀರಿನೊಳಗೆ ನಮ್ಮ ಕರ್ನಾಟಕದ ಪಾಲು ಎಷ್ಟು? ಮತ್ತು ಅದರ ಕಮ್ಯಾಂಡ್ ಏರಿಯಾ ಎಷ್ಟು? ಒಂದು ಟಿಎಂಸಿ ನೀರಿನಲ್ಲಿ ಅಲ್ಲಿ ಎಷ್ಟು ಎಕರೆ ನೀರಾವರಿ ಆಗುತ್ತಿದೆ?

ಶ್ರೀ ಎನ್.ಎಸ್.ಬೋಸರಾಜು:- ಸನ್ಮಾನ್ಯ ಶಾಸಕ ಮಿತ್ರರು ಹೇಳಿದಂತೆ ತುಂಗಭದ್ರಾ ರಿಸರ್ವಾಯರ್‌ನಲ್ಲಿ ಪ್ರಸ್ತುತ ಪರಿಸ್ಥಿತಿಯಲ್ಲಿ ತುಂಗಭದ್ರಾ ಎಡದಂತೆ ಕಾಲುವೆ ಪ್ರದೇಶದಲ್ಲಿ ಬರುವಂತಹ ಕೊಪ್ಪಳ, ರಾಯಚೂರು ಜಿಲ್ಲೆ ಹಾಗೂ ರೈಟ್ ಬ್ಯಾಂಕ್ ಕೆನಾಲ್‌ನಲ್ಲಿ ಬರತಕ್ಕಂಥ ಎಲ್‌ಎಲ್‌ಸಿನಲ್ಲಿ ಶಿರಗುಪ್ಪ ಮತ್ತು ಬಳ್ಳಾರಿಗೆ ಇರುವಂತಹ ಸ್ಪಾ ್ಯಂಡಿಂಗ್ ಕ್ರಾಪ್‌ನಲ್ಲಿ ಅದು ಭತ್ತ ಇರಬಹುದು, ಶೇಂಗಾ ಇರಬಹುದು ಮತ್ತು ಇತರ ಕ್ರಾಫ್‌ಗಳು ಇರಬಹುದು, ಒಟ್ಟಾರೆ ಇರುವಂತಹ ಕ್ರಾಪ್‌ಗಳಿಗೆ ನಾವು ತಕ್ಷಣ ನೀರನ್ನು ಒದಗಿಸುವುದರ ಮುಖಾಂತರ ಅಲ್ಲಿ ರೈತರಿಗೆ ರಕ್ಷಣೆ ಕೊಡುವಂತಹ ಒಂದು ಪ್ರಶ್ನೆ ಉದ್ಭವಿಸಿದೆ. ಈಗಾಗಲೇ ಈ ದಿಸೆಯಲ್ಲಿ ಸನ್ಮಾನ್ಯ ಸಚಿವರು, ಕಳೆದ ಮೂರು ದಿವಸಗಳಿಂದ ನಾವೆಲ್ಲಾ ಶಾಸಕ ಮಿತ್ರರು ಸೇರಿ ಕೇಳಿಕೊಂಡಾಗ ಸಾಕಷ್ಟು ಪ್ರಯತ್ನ ಮಾಡಿ ಅಲ್ಲಿರತಕ್ಕ ಅಂಕಿ ಅಂಶಗಳನ್ನು ತಿಳಿದುಕೊಂಡು ಭದ್ರಾ ಪ್ರದೇಶದಲ್ಲಿರತಕ್ಕಂಥ ರೈತರಿಗೆ ತೊಂದರೆ ಆಗದಂತೆ ಸ್ವಲ್ಪ ಮಟ್ಟಿಗೆ ನೀರು ಒದಗಿಸುವ ಮುಖಾಂತರ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಯ ರೈತರ ಸ್ಪಾ ್ಯಂಡಿಂಗ್ ಕ್ರಾಪ್‌ಗೆ ನೀರು ಒದಗಿಸಬೇಕೆಂಬ ನಿರ್ಧಾರಕ್ಕೆ ಬಂದು ಅವರು ಪ್ರಯತ್ನ ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ಆತಂಕ ಆಗಿದೆ ಎನ್ನುವ ಮಾತು ನಮಗೆ ಕೇಳಿ ಬಂದಿದೆ. ಇವತ್ತು ಬೆಳಿಗ್ಗೆ 8 ಗಂಟೆಯ ಮಾಹಿತಿ ಪ್ರಕಾರ ನಮ್ಮ ಎಡದಂತೆ ಕಾಲುವೆಯಲ್ಲಿ ನೀರು ಬರತಕ್ಕ ಲೆವೆಲ್ 1519ರ ಸಮೀಪಕ್ಕೆ ಈಗಾಗಲೇ ಬಂದಿದೆ. ಇನ್ನೂ ನಮಗೆ ಕೊಪ್ಪಳ ಮತ್ತು ರಾಯಚೂರಿಗೆ ಅಲೊಕೇಶನ್ ಇದ್ದು ಆ ಕೆನಾಲ್‌ಗೆ ನೀರು ಕೊಡಮಂಥಹ ಒಂದು ಪರಿಸ್ಥಿತಿ ಇದ್ದಾಗಲೂ ಸಹಿತ ಇವತ್ತು ನೀರು ಬಾರದೇ 4 ಲಕ್ಷ ಎಕರೆಯಲ್ಲಿ ಬೆಳೆದು ನಿಂತಿರತಕ್ಕ ಶೇಂಗಾ, ನೆಲ್ಲು ಮತ್ತು ಇತರ ಅನೇಕ ಬೆಳೆಗಳನ್ನು ಕಾಪಾಡದೇ ಇದ್ದರೆ ನನ್ನ ಅಂದಾಜು ಒಟ್ಟಿಗೆ ಸೇರಿ 500 ರಿಂದ 600 ಕೋಟಿ ರೂಪಾಯಿ ಲಾಸ್ ಆಗತಕ್ಕಂಥ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗುತ್ತದೆ. ಇವತ್ತು ಪರಿಸ್ಥಿತಿ ಉದ್ಭವಿಸಿಲ್ಲ. ಆ ನೀರು ಎಷ್ಟು ಎಕರೆಗೆ ಬರುತ್ತದೆ? ಎಷ್ಟು ನೀರು ಇದೆ? ಎಷ್ಟು ನೀರು ತುಂಬಿದೆ? ಎಂಬ ಪ್ರಶ್ನೆ ಕಳೆದ 25 ವರ್ಷಗಳಿಂದ ಸತತವಾಗಿ ಅಲ್ಲಿ ಶಿಲ್ಪ್ ಆಗಿರುವ ಹೆಚ್ಚಿನ ಭಾಗದಿಂದ ಈ ಕೊನೆಯ ಭಾಗದ ರೈತರಿಗೆ ಹಾಗೂ ಕೆಳಗಿನ ಪ್ರದೇಶದಲ್ಲಿರತಕ್ಕಂಥ ರೈತರಿಗೆ ತೊಂದರೆ ಆಗುತ್ತದೆ.

ಅಧ್ಯಕ್ಷರು: ತಾವು ಸಪ್ಲಿಮೆಂಟರಿ ಕೇಳಿ.

ಶ್ರೀ ಎನ್.ಎನ್. ಭೋಸರಾಜು: ಈ ಕಾರಣಕ್ಕಾಗಿ ಏನಾದರೂ ಮಾಡಿ ಭದ್ರಾ ರಿಸರ್ವಾಯರ್‌ನಿಂದ ನೀರು ಬಿಡಿಸುವಂತಹ ಪ್ರಯತ್ನ ಮಾಡಬೇಕೆಂದು ನನ್ನ ಒತ್ತಾಯ ಇದೆ.

ಶ್ರೀ ಎಂ.ಶಂಕರ್ ರೆಡ್ಡಿ: ನಾವೆಲ್ಲಾ ಕೇಳುವುದು ನಾಳೆ ಹೇಗೆ ಬದುಕಬೇಕು ಎಂದು ಮುಂದೆ ನಾವು ಸಿಂಗಟಾಲೂರು ಅಥವಾ ಇನ್ನೊಂದು ಯೋಜನೆ ಬಗ್ಗೆ ವಿಚಾರ ಮಾಡೋಣ.

ಶ್ರೀ ಎಸ್.ಎ. ರವೀಂದ್ರನಾಥ್:- ಮಾನ್ಯ ಅಧ್ಯಕ್ಷರೇ, ಭದ್ರಾ ಡ್ಯಾಂನಲ್ಲಿ ಪ್ರತಿವರ್ಷ 150 ದಿವಸ ಬೇಸಿಗೆ ಒಳಗೆ ನೀರು ಬಿಟ್ಟಿದ್ದೇವೆ. ಈ ವರ್ಷ 110 ದಿವಸ ನೀರು ಬಿಡುವಷ್ಟು

ಇದೆ. ಇನ್ನೂ 40 ದಿವಸ ಬಿಡುವಷ್ಟು ನೀರು ಇಲ್ಲ. ನಮಗೆ ಇನ್ನೂ 50 ದಿವಸ ನೀರು ಬೇಕಾಗಿತ್ತು. ಆ ಕಾರಣದಿಂದ ನಾವು ನಿಮ್ಮ ಮುಖಾಂತರ ಅಧ್ಯಕ್ಷರನ್ನು ಕೇಳುತ್ತೇನೆ. ನಮ್ಮಲ್ಲಿ ನದಿ ನೀರು ಸಹ ಬಿಡುವುದಕ್ಕೆ ಆಗುವುದಿಲ್ಲ. ಕಾರಣ ನಮ್ಮಲ್ಲಿ ಸಹ ಒಂದು ಲಕ್ಷ 25 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆ ಇದೆ. ಆದ್ದರಿಂದ ದಯಮಾಡಿ ಇಲ್ಲಿರುವವರೂ ಸಾಯುವುದು, ಅಲ್ಲಿರುವವರೂ ಸಾಯುವುದು ಆಗದ ಹಾಗೆ, ಒಂದು ಕಡೆ ಭಾಗದಲ್ಲಿ ಏನಾದರೂ ಆಗಲಿ. ಆದರೆ ನಮ್ಮಲ್ಲಿ ಅಂತೂ ಬಹಳ ದುಸ್ತರವಾಗಿ, ಇರತಕ್ಕಂಥಹ ನೀರನ್ನು ಇನ್ನು 50 ದಿವಸ ಹರಿಸದೇ ಇದ್ದರೆ ನಮ್ಮಲ್ಲಿ ಸಹ ಸಾವಿರಾರು ಕೋಟಿ ರೂಪಾಯಿ ಬೆಳೆ ಹಾಳಾಗುತ್ತದೆ. ದಯಮಾಡಿ ನಾನು ನಿಮ್ಮ ಮುಖಾಂತರ ನೀರಾವರಿ ಮಂತ್ರಿಗಳನ್ನು ಕೇಳುತ್ತೇನೆ. ಯಾವುದೇ ಕಾರಣದಿಂದ ಭದ್ರಾ ಡ್ಯಾಂನಿಂದ ಒಂದು ಹನಿ ನೀರು ಕೂಡ ಬಿಡ ಕೂಡದು, ಅಲ್ಲಿನ ರೈತರೂ ಸಹ ಬಹಳ ಹೋರಾಟ ಮಾಡುತ್ತಾರೆ, ಅವರಿಗೆ ಅದರ ಬಗ್ಗೆ ಕಲ್ಪನೆ ಇದೆ. ಅದು ಆಗಕೂಡದು ಎಂದು ನಾನು ನಿಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಜಲಾಶಯದಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆ ಆಗಿದೆ. ಪ್ರತಿ ವರ್ಷ 170 ಟಿಎಂಸಿವರೆಗೆ ಅಲ್ಲಿ ನೀರಿನ ಸಂಗ್ರಹಣೆ ಆಗುತ್ತಿದೆ. ಆದರೆ ಈ ವರ್ಷ ಎಲ್ಲಾ ಕಡೆ ಕಡಿಮೆ ಮಳೆ ಆಗಿರುವುದರಿಂದ ಆಲ್ಲೂ ಕೂಡ ನೀರಿನ ಪ್ರಮಾಣ ಕಡಿಮೆ ಆಗಿದೆ. ತುಂಗಭದ್ರಾ ಜಲಾಶಯದಿಂದ ನೀರನ್ನು ಏನು ಕ್ರೋಡಣಿ ಮಾಡುತ್ತೇವೆ, ಆ ಎಲ್ಲಾ ಕೆನಾಲ್‌ಗಳಿಗೆ ನೀರು ಕಡಿಮೆ ಆದಾಗ ಯಾವ್ಯಾವಾಗ ತೊಂದರೆ ಇತ್ತೋ ಆಗ ಭದ್ರಾಜಲಾಶಯದಿಂದ ನೀರನ್ನು ನಾವು ಕೊಡುತ್ತಿದ್ದೆವು. ಆದರೆ ನಮ್ಮ ದುರ್ದೈವ ಎಂದರೆ ಈ ಸಲ ಭದ್ರಾದಲ್ಲೂ ಸಹ ಬಹಳ ಕಡಿಮೆ ಪ್ರಮಾಣದಲ್ಲಿ ನೀರು ಸಂಗ್ರಹಣೆ ಆಯಿತು. ಈಗ ಸನ್ಮಾನ್ಯ ಹಂಪನಗೌಡರು ಅಭಿಪ್ರಾಯ ಪಟ್ಟ ಹಾಗೆ ಆ ಭಾಗದ ರೈತರು ತೊಂದರೆಯಲ್ಲಿದ್ದಾರೆ. ಸನ್ಮಾನ್ಯ ಬೋಸರಾಜು, ಸನ್ಮಾನ್ಯ ಶಂಕರರೆಡ್ಡಿಯವರು, ಸನ್ಮಾನ್ಯ ಅಲ್ಲಂ ವೀರಭದ್ರಪ್ಪನವರು ಪ್ರಸ್ತಾಪ ಮಾಡಿದ ಹಾಗೆ ಆ ಭಾಗದ ರೈತರ ಪೀಕ್ ಇನ್ನೇನು ಕೊನೆಯ ಹಂತಕ್ಕೆ ಬಂದಿದೆ. ಐಸಿಸಿ ಮೀಟಿಂಗ್‌ನ ನಿರ್ಣಯದ ಪ್ರಕಾರ 25ನೇ ತಾರೀಖಿನವರೆಗೆ ಎಲ್‌ಬಿಸಿಗೆ ನೀರು ಬಿಡಬೇಕಾಗಿತ್ತು. ಕೊನೆಯ ಹಂತಕ್ಕೆ ಬಂದಾಗ ಅಲ್ಲಿ ನೀರಿನ ಪ್ರಮಾಣ ಹೆಚ್ಚು ಕಡಿಮೆ ಆಗಿ ಕುಡಿಯುವುದಕ್ಕೆ ನೀರಿನ ಪ್ರಮಾಣ ಹೆಚ್ಚು ಕಡಿಮೆ ಆಗಿ ಕುಡಿಯುವುದಕ್ಕೆ ನೀರು ಬೇಕು ಹಾಗೆ ಎಂದು ಹೇಳಿ ಬಹಳಷ್ಟು ಸರ್ಕಾರದ ಗಮನವನ್ನು ಸೆಳೆದರು. ನಾನು ಭದ್ರಾ ಜಲಾಶಯದಿಂದ ನೀರಾವರಿ ಅಚ್ಚುಕಟ್ಟು ಪ್ರದೇಶ ಏನು ಇದೆ, ಆ ಅಚ್ಚುಕಟ್ಟು ಪ್ರದೇಶದ ಶಾಸಕರನ್ನು 18,19ನೇ ತಾರೀಖಿಗೆ ಕರೆದು ವಿವರವಾಗಿ ಚರ್ಚೆಯನ್ನೂ ಮಾಡಿದ್ದೇನೆ. ಕುಡಿಯುವ ನೀರಿನ ಅವಶ್ಯಕತೆ ಏನು ಇದೆ, ಆ ಕುಡಿಯುವ ನೀರನ್ನು ಬಿಡುವ ಬಗ್ಗೆ ಶಾಸಕರು ಯಾರೂ ತಮ್ಮ ವಿರೋಧವನ್ನು ವ್ಯಕ್ತ ಮಾಡಲಿಲ್ಲ. ಆದರೆ ನಮ್ಮಲ್ಲಿ ನೀರಿನ ಕೊರತೆ ಇದೆ ಎಂದು ಹೇಳಿ ಅದನ್ನು ನಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡಿದರು. ಒಟ್ಟಾರೆ ಸ್ವಲ್ಪ ಪ್ರಮಾಣದ ನೀರನ್ನು ನಾವು ಕುಡಿಯುವ ನೀರಿಗೆ ಹಾಗೂ ಈ ತುಂಗಭದ್ರಾ ಜಲಾಶಯದವರಿಗೆ ಅನುಕೂಲ ಆಗತಕ್ಕ ರೀತಿಯಲ್ಲಿ ಅವರಿಗೂ ಒಂದು ಟಿಎಂಸಿಯಷ್ಟು ನೀರನ್ನು ಒದಗಿಸಬೇಕು ಹಾಗೆ ಎಂದು ಹೇಳಿ ಒಂದು ನಿರ್ಣಯಕ್ಕೆ ಬಂದೆವು. ಆದರೆ ಆ ನಿರ್ಣಯಕ್ಕೆ ಬಂದಮೇಲೆ ಆ ಭಾಗದ ರೈತರು, ಭದ್ರಾ ಜಲಾಶಯದ ಹತ್ತಿರ

ನಿನ್ನೆ ಎಲ್ಲಾ ಸೇರಿ ಅವರಿಗೆ ಹಲವಾರು ಆತಂಕಗಳು ಏನು ಇವೆ ಅದನ್ನು ವ್ಯಕ್ತ ಮಾಡಿ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಬಹಳ ಚರ್ಚೆ ವಾದ ವಿವಾದ ಮಾಡಿದ್ದಾರೆ. ವಾದ ವಿವಾದಗಳಾದ ಮೇಲೆ ನಾನು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅಲ್ಲಿರತಕ್ಕಂಥ ರೈತರಿಗೆ ಕುಡಿಯುವ ನೀರಿನ ಸಂಗ್ರಹ, ಹಾಗೂ ಒಂದು ವೇಳೆ ಹೆಚ್ಚು ಕಡಿಮೆ ಏನು ಮಾಡಬಹುದು ಹಾಗೆ ಎಂದು ಹೇಳಿ ಸನ್ಮಾನ್ಯ ಅಲ್ಲಂ ವೀರಭದ್ರಪ್ಪನವರು ಕೊಟ್ಟಿರತಕ್ಕಂಥ ಒಂದು ಸಲಹೆಯ ಹಿನ್ನಲೆಯೊಳಗೆ ಆ ಡೆಡ್ ಸ್ಟೋರೇಜ್ ಏನು ಇರುತ್ತದೆ, ಆ ಡೆಡ್ ಸ್ಟೋರೇಜ್‌ನಿಂದ ಸ್ವಲ್ಪ ಪ್ರಮಾಣದ ನೀರನ್ನಾದರೂ ತೆಗೆದು ನಾವು ಕೆನಾಲ್‌ಗೆ ಹಾಕುವುದಕ್ಕೆ ಸಾಧ್ಯವಾಗುತ್ತದೆ ಅದನ್ನು ಪ್ರಯೋಗ ಮಾಡೋಣ, ಪ್ರಯತ್ನ ಮಾಡೋಣ. ಅದಕ್ಕಿಂತ ಹೆಚ್ಚಾಗಿ ಈಗ ಇನ್ನೂ ಒಂದು ತಿಂಗಳು 15 ದಿವಸ ಸಮಯ ಇದೆ. ಮೇ 13 ರಂದು ಭದ್ರಾ ಜಲಾಶಯದಿಂದ ನೀರು ಬಿಡುವುದಕ್ಕೆ ಕಡೆಯ ತಾರೀಖು. ಈ ಒಂದು ತಿಂಗಳು 13 ದಿವಸ ಏನು ಇದೆ, ಈ ಒಂದು ಅವಧಿಯೊಳಗೆ ನಮಗೆ ಮಳೆ ಆಗುವ ಸಾಧ್ಯತೆಯೂ ಇದೆಯೆಂದು ಇವತ್ತು ವೆದರ್ ರಿಪೋರ್ಟ್ ಹೇಳುತ್ತಿವೆ. ಆ ಹಿನ್ನಲೆಯೊಳಗೆ ನೀರು ಬಿಡುವುದಕ್ಕೆ ಅವಕಾಶ ಮಾಡಿಕೊಡಿ ಹಾಗೆ ಎಂದು ಹೇಳಿ ನಮ್ಮ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಶಾಸಕರಿಗೆ ನಾವು ಈಗಾಗಲೇ ಮನವರಿಕೆ ಮಾಡುವ ಪ್ರಯತ್ನ ಮಾಡಿದ್ದೇವೆ. ಆದರೂ ಸಹ ನಿನ್ನೆ ನಡೆದ ಪ್ರಯತ್ನ ಫಲಪ್ರದವಾಗಿಲ್ಲ. ಪುನಃ ನಾಳೆ ಐಸಿಸಿ ಮೀಟಿಂಗ್ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆಂಬ ಒಡಂಬಡಿಕೆ ಅಧಿಕಾರಿಗಳು ಹಾಗೂ ರೈತ ಮುಖಂಡರುಗಳ ನಡುವೆ ಆಗಿದೆ. ಈ ಸಂದರ್ಭದಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಶಾಸಕರಿರಲಿ, ರೈತ ಮುಖಂಡರಿರಲಿ, ನೀವು ಎಲ್ಲವನ್ನೂ ವಾಸ್ತವಿಕವಾಗಿ ಪರಿಗಣಿಸಿ ನಿಮ್ಮ ಸಹೋದರರಾದ ಮತ್ತೊಬ್ಬರು ತೊಂದರೆಯಲ್ಲಿದ್ದರೆ ಅದಕ್ಕೆ ಸ್ಪಂದಿಸುವ ಔದಾರ್ಯತೆಯನ್ನು ಭದ್ರಾ ಮತ್ತು ತುಂಗಾ ಜಲಾನಯನ ಪ್ರದೇಶದಲ್ಲಿ ವಾಸಿಸುತ್ತಿರುವವರು ತೋರಿಸಬೇಕು. ಒಮ್ಮೆ ತೊಂದರೆಯಾದಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಕರಡಿ ಸಂಗಣ್ಣನವರು ಮತ್ತೊಬ್ಬ ಸದಸ್ಯರಾದ ಎಸ್.ಎಸ್. ಪಾಟೀಲರನ್ನು ಉದ್ದೇಶಿಸಿ " ನೀವು ಬಹಳಷ್ಟು ನೀರಾವ ಮಾಡಿಕೊಂಡಿದ್ದೀರಿ" ಅಂದಾಗ ಅವರಿಗೆ ಸಿಟ್ಟೇ ಬಂದು ಬಿಟ್ಟಿತು. ಏಕೆಂದರೆ, ಅವರು ತಲತಾಲಂತರದಿಂದ ಬರದ ಪರಿಸ್ಥಿತಿಯಲ್ಲಿದ್ದವರಿಗೆ ನೀವು ನೀರು ಕೊಡುವುದಿಲ್ಲವೆಂದಾಗ ಸಹಜವಾಗಿಯೇ ಅವರಿಗೆ ಸಿಟ್ಟು ಬರುತ್ತದೆ. ಭದ್ರಾ ಜಲಾನಯನ ಪ್ರದೇಶದಲ್ಲಿ ವಾಸಿಸುತ್ತಿರುವವರಿಗೂ ನೀರು ಕೊಡುವುದಿಲ್ಲವೆಂದರೆ ನಿಮಗೂ ಸಿಟ್ಟು ಬರುತ್ತದೆ. ಆದಕಾರಣ, ರೈತರು ವಾಸ್ತವಿಕತೆಯನ್ನು ಅರ್ಥಮಾಡಿಕೊಂಡು ಹೆಚ್ಚು ಔದಾರ್ಯತೆಯಿಂದ ನಡೆದುಕೊಳ್ಳುವಂತೆ ಆಗಬೇಕು. ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಭದ್ರಾ ಅಚ್ಚುಕಟ್ಟು ಪ್ರದೇಶದ ಶಾಸಕರುಗಳು ನಾಳೆ ಐಸಿಸಿ ಮೀಟಿಂಗ್‌ಗೆ ಹೋಗುತ್ತಿರುವುದರಿಂದ, ಈಗಾಗಲೇ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಸ್ಥಿತಿ-ಗತಿಯನ್ನು ತಾವು ನೋಡಿರುವುದರಿಂದ ಈ ದಿಸೆಯಲ್ಲಿ ಅಂಕಿ-ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಆಮೂಲಾಗ್ರವಾಗಿ ಚರ್ಚಿಸಿ ಒಂದು ನಿರ್ಣಯಕ್ಕೆ ಬರಬೇಕು. ಈ ನಿಟ್ಟಿನಲ್ಲಿ ಸರ್ಕಾರವು ತನ್ನ ಪ್ರಯತ್ನ ಮಾಡುತ್ತಿದೆ. ಸರ್ಕಾರವು ನೀರು ಬಿಡಿಸುವುದಕ್ಕೆ ಪ್ರಯತ್ನಿಸುತ್ತಿರುವುದರಿಂದ ಈ ಕುರಿತು ಅಂತಿಮ ನಿರ್ಣಯವನ್ನು ನಾವು ನಾಳೆ ತೆಗೆದುಕೊಳ್ಳುತ್ತೇವೆ.

ಶ್ರೀ ಹಂಪನಗೌಡ ಬಾದರ್ಲಿ: ಈಗ ಉದ್ಭವವಾಗಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸುವಂಥ ಸಂದರ್ಭದಲ್ಲಿ, ಎಡದಂಡೆ ಮುಖ್ಯ ಕಾಲುವೆ ಸುಮಾರು 1575 ಅಡಿಗಳಷ್ಟು ಮೇಲ್ಮಟ್ಟದಲ್ಲಿರುವುದರಿಂದ ಇವೊತ್ತು ನಿರ್ಣಯ ತೆಗೆದುಕೊಳ್ಳದಿದ್ದರೆ, ಸುಮಾರು 2000 ದಿಂದ 3000 ಕ್ಯುಸೆಕ್ಸ್‌ಗಳಷ್ಟು ನೀರನ್ನು ಭದ್ರಾ ಜಲಾಶಯದಿಂದ ಬಿಡುಗಡೆ ಮಾಡಿದರೂ ಅದು ತುಂಗಾ ಜಲಾಶಯಕ್ಕೆ ತಲುಪಲು ಕನಿಷ್ಠ ಎರಡು ದಿವಸಗಳಾದರೂ ಬೇಕಾಗುತ್ತದೆ. ಇಂತಹ ಪರಿಸ್ಥಿತಿಯಿರುವಾಗ ಮುಂದೆ ನೀರು ಬಿಟ್ಟರೂ ಏನೂ ಪ್ರಯೋಜನವಾಗುವುದಿಲ್ಲ. ನೀರು ಬಿಟ್ಟರೂ ಜಲಾಶಯಕ್ಕೆ ಬಂದನಂತರ ಕಾಲುವೆಗಳ ಮೂಲಕ ಹರಿದು ರೈತರ ಜಮೀನಿಗೆ ಬರಬೇಕಾದರೆ ಕನಿಷ್ಠ ಮೂರ್ನಾಲ್ಕು ದಿವಸಗಳಾದರೂ ಬೇಕಾಗುತ್ತದೆ. ಈಗ ಭತ್ತದ ಸೀಡ್ ಫಾರ್ಮೇಶನ್ ಆಗುತ್ತಿರುವುದರಿಂದ ರೈತರಿಗೆ ಕೊನೆಯ ಕಂತಿನ ನೀರು ಕೊಡದಿದ್ದರೆ ಬೆಳೆದು ನಿಂತಿರುವ ಬೆಳೆ ನೂರಕ್ಕೆ ನೂರರಷ್ಟು ನಾಶವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಅದಕ್ಕೋಸ್ಕರ ನಾನು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಾ, ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಭದ್ರಾ ಜಲಾಶಯದಲ್ಲಿ ಪ್ರತಿವರ್ಷವೂ ಸುಮಾರು 13-14 ಟಿಎಂಸಿಯಷ್ಟು ನೀರು ಡೆಡ್ ಸ್ಟೋರೇಜ್ ಆಗಿ ಕ್ಯಾರಿ ಓವರ್ ಆಗುತ್ತಿದೆ. ಅವರಿಗೂ ಇವೊತ್ತು ಸಮಸ್ಯೆ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಅಲ್ಲಿಯೂ 1660 ಐಡಿಎಎಲ್‌ವರೆಗೆ ನೀರು ಸಂಗ್ರಹಿಸದಿದ್ದರೆ ಎಡದಂಡೆ ನಾಲೆಗೆ ಹರಿಸಲು ನೀರು ಇರುವುದಿಲ್ಲವೆಂಬುದು ನಮ್ಮ ಅನುಭವಕ್ಕೂ ಬಂದಿದೆ. ಏಕೆಂದರೆ, ಮೂರು ದಿವಸಗಳ ಹಿಂದೆ ನಾನು ಸಂಬಂಧಪಟ್ಟ ಇಂಜಿನಿಯರ್ ಅವರೊಂದಿಗೆ ಭದ್ರಾ ಜಲಾಶಯಕ್ಕೆ ಭೇಟಿಯಿತ್ತು ಚರ್ಚಿಸಿದಾಗ ಕಳೆದ ವರ್ಷ ಹಾಗೂ ಪ್ರಸಕ್ತ ವರ್ಷಕ್ಕೆ ಹೋಲಿಸಿದಾಗ ಇನ್‌ಫ್ಲೋ ಹೆಚ್ಚು ಇರುವುದರಿಂದ ಬಂದು ಒಂದೂವರೆ ತಿಂಗಳಲ್ಲಿ ನದಿಗೆ ಪುನಃ ನೀರು ಬಂದು ಸೇರಬಹುದು. ಇವೊತ್ತು ತುಂಗ ಭದ್ರಾ ಜಲಾಶಯದ ಎಡದಂಡೆ ನಾಲೆಯ ರೈತರಿಗೆ 3-4 ಟಿಎಂಸಿಯಷ್ಟು ನೀರನ್ನು ಬಿಡದಿದ್ದರೆ ಸುಮಾರು ಕೋಟಿ ರೂಪಾಯಿಗಳಷ್ಟು ಬೆಳೆ ಹಾನಿಯಾಗುತ್ತದೆ. ಆದುದರಿಂದ, ನೀರನ್ನು ಬಿಡುವ ಮುಖಾಂತರ ಸಮಸ್ಯೆಗೆ ಪರಿಹಾರ ಸೂಚಿಸಬೇಕೆಂದು ಒತ್ತಾಯಪೂರ್ವಕವಾಗಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ :- ನಾನು ಈಗಾಗಲೇ ತಿಳಿಸದಂತೆ 25ನೇ ತಾರೀಖು ನೀರು ಬಿಡುವುದಕ್ಕೆ ಕೊನೆಯ ದಿನಾಂಕವಾಗಿರುತ್ತದೆ. ಇವೊತ್ತು ನೀರು ಹರಿಯುತ್ತಿರುವುದರಿಂದ ಯಾವುದೇ ಸಮಸ್ಯೆಯಿರುವುದಿಲ್ಲ. ನಿಮ್ಮದು ಒಂದು ರೀತಿಯ ಸಮಸ್ಯೆಯಾದರೆ ಬಳ್ಳಾರಿಯವರದು ಮತ್ತೊಂದು ರೀತಿಯ ಸಮಸ್ಯೆ. ಬಳ್ಳಾರಿಯವರಿಗೆ ನೀರು ಬಿಡಬೇಕಾದರೆ ನೀವು ಔದಾರ್ಯತೆ ತೋರಬೇಕು. ನಿಮಗೆ ನೀರು ಬಿಡಬೇಕಾದರೆ ಭದ್ರಾ ಜಲಾನಯನ ಪ್ರದೇಶದವರು ಔದಾರ್ಯತೆ ತೋರಬೇಕು. ಈ ಮೂರು ಜನರು ಔದಾರ್ಯತೆಯಿಂದ ವರ್ತಿಸಿದರೆ ಸಮಸ್ಯೆ ಬಹಳ ಸರಳವಾಗಿ ಬಗೆಹರಿಯುತ್ತದೆ. ಆದಕಾರಣ, ಆ ಔದಾರ್ಯತೆಯನ್ನು ತಾವುಗಳು ತೋರಿಸಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನು ಲೋಕಲೈಜೇಷನ್ ಬಗ್ಗೆ ಮಾನ್ಯ ಸದಸ್ಯರಾದ ಕರಡಿ ಸಂಗಣ್ಣನವರು ಕೇಳಿದ್ದರೆ, ಎಷ್ಟು ಹೆಚ್ಚುವರಿ ಬೆಳೆ ಇದೆಯೆಂಬ ವಿಚಾರವನ್ನು ಮಾನ್ಯ ಸದಸ್ಯರಾದ ಎಸ್.ಎಸ್. ಪಾಟೀಲರು ಕೇಳಿದ್ದಾರೆ. ತುಂಗಭದ್ರಾ ಜಲಾಶಯದಲ್ಲಿರುವ ನೀರಿನ ಪ್ರಮಾಣಕ್ಕೆ ಅಂಕಿ-ಅಂಶಗಳ ಪ್ರಕಾರ ಎಷ್ಟು ಪ್ರಮಾಣದಲ್ಲಿ ಬೆಳೆ ತೆಗೆಯಬಹುದೆಂದು ಇದೆಯೋ ಅಷ್ಟಕ್ಕೆ ನೋಡಿದರೆ ಸಾಕಾಗಬೇಕು.

ಆದರೆ, ಅನಧಿಕೃತವಾಗಿ ಸಾಕಷ್ಟು ಅಚ್ಚುಕಟ್ಟು ಪ್ರದೇಶ ಅಲ್ಲಿ ಬಂದಿರುವುದರಿಂದ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಈ ಅನಧಿಕೃತ ಅಚ್ಚುಕಟ್ಟು ಪ್ರದೇಶ ಬಹಳ ದಿನವಸಗಳಿಂದಲೂ ಮುಂದುವರೆದುಕೊಂಡು ಬಂದಿದ್ದು, ಈ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚಿಸುವುದು ಅವಶ್ಯವಿಲ್ಲವೆಂದು ಭಾವಿಸುತ್ತೇನೆ. ಯಾವುದಾದರೂ ಬೇರೆ ಸಂದರ್ಭದಲ್ಲಿ ಈ ಬಗ್ಗೆ ಸವಿಸ್ತಾರವಾಗಿ ಚರ್ಚಿಸೋಣ. ಐಸಿಸಿ ಮೀಟಿಂಗ್‌ನಲ್ಲಿ ಶಾಸಕರುಗಳು ಮತ್ತು ರೈತ ಪ್ರತಿನಿಧಿಗಳಿರುವುದರಿಂದ ಅಲ್ಲಿ ಏನು ನಿರ್ಣಯ ಅಂಗೀಕಾರವಾಗುತ್ತದೋ ಅದಕ್ಕೆ ಕಟಿಬದ್ಧರಾಗಲು ಪ್ರಯತ್ನಿಸಬೇಕು. ಹಿಂದೆ ನಡೆದ ಐಸಿಸಿ ಮೀಟಿಂಗ್‌ನಲ್ಲಿ ರೈತರು ಈ ಸಲ ಭತ್ತ ಹಾಕಬಾರದೆಂದು, ಮುಂದಾಳುಗಳು ಸ್ಪಷ್ಟವಾಗಿ ಹೇಳುವ ಪ್ರಯತ್ನ ಮಾಡಿದ್ದರೂ ಬಹಳಷ್ಟು ಕಡೆ ರೈತರು ಅವರ ಮಾತನ್ನು ಕೇಳಲಿಲ್ಲ. ಪರಿಣಾಮವಾಗಿ ಮುಂದೆ ಒಂದು ವರ್ಷದ ನಂತರ ಏನಾಗುತ್ತದೋ ಏನೋ ನಾವು ಹಾಕುವಂತೆ ಭತ್ತ ಹಾಕೋಣವೆಂದು ತೀರ್ಮಾನಿಸಿದರು. ಇಂತಹ ಪ್ರವೃತ್ತಿ ರೈತ ಬಾಂಧವರಲ್ಲಿ ಬಂದಾಗ ಕೊನೆಯ ಹಂತದಲ್ಲಿ ಅವರು ಬಹಳ ಸಮಸ್ಯೆ ಎದುರಿಸಬೇಕಾಗುತ್ತದೆ. ಆದಕಾರಣ, ನಮ್ಮ ರೈತರು ಐಸಿಸಿಯ ನಿರ್ದೇಶನಗಳನ್ನು ಪಾಲಿಸುವಂತಾಗಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಜೊತೆಗೆ ನಾನು ಸರ್ಕಾರದ ಪರವಾಗಿ ಭದ್ರಾ ಹಾಗೂ ತುಂಗಾ ಅಚ್ಚುಕಟ್ಟು ಪ್ರದೇಶದ ರೈತರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಿಮ್ಮ ರೈತ ಸಹೋದರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಔದಾರ್ಯತೆಯಿಂದ ನಡೆದುಕೊಳ್ಳಬೇಕು.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ :- ನಾಳೆ ನೀರು ಬಿಡಲಿಲ್ಲವೆಂದರೆ ತುಂಬಾ ತೊಂದರೆಯುಂಟಾಗುತ್ತದೆ. ನೀರು ಬಿಡಿಸುವುದಕ್ಕೆ ಸರ್ಕಾರದಲ್ಲಿ ತನ್ನದೇ ಆದ ಕಾರ್ಯವಿಧಾನಗಳಿರುತ್ತವಾದ್ದರಿಂದ ಹಿಂದಿನ ಸರ್ಕಾರ ಈ ವಿಚಾರದಲ್ಲಿ ಯಾವ ರೀತಿ ಕ್ರಮ ಕೈಗೊಂಡಿದೆಯೋ ಅದೇ ರೀತಿ ಈ ಸರ್ಕಾರ ಕೂಡ ರೈತರ ಸಮಸ್ಯೆಗೆ ಸ್ಪಂದಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್ :- ನನಗೆ ಸಮಸ್ಯೆ ಬಗೆಹರಿಸಬೇಕೆನ್ನುವ ಕಡೆ ಲಕ್ಷ್ಯವಿದೆ. ಆ ಕಾರಣಕ್ಕಾಗಿ ಸಧ್ಯಕ್ಕೆ ನೀರು ಬಿಡುತ್ತೇನೆಂದು ಹೇಳಲೇ ? ಇದರ ಬಗ್ಗೆ ನಾವು ನೀವು ರಾಜಕಾರಣ ಮಾಡುವುದಲ್ಲ, ನೀವು ಭದ್ರಾ ಜಲಾಶಯಕ್ಕೆ ಹೋಗಿ ಬಂದಾಗಿನಿಂದ ಆ ಭಾಗದ ಶಾಸಕರು ಹಾಗೂ ರೈತರು 'ನೀರು ಬಿಡುತ್ತೀರಾ' ಎಂದು ನನಗೆ ಪ್ರಶ್ನೆ ಹಾಗೂ ತಕರಾರು ಮಾಡುತ್ತಿರುವುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಆದುದರಿಂದ, ಈ ಚರ್ಚೆಯನ್ನು ವಿಸ್ತಾರ ಮಾಡುವ ಬದಲಿಗೆ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ಮಾಡುತ್ತಿದ್ದೇವೆ. ಆದಕಾರಣ ಬಳ್ಳಾರಿಯವರಿಗೆ ಸಹಕರಿಸುವಂತೆ ನಿಮಗೂ ವಿನಂತಿಸುತ್ತೇನೆ, ನಿಮಗೂ ಸಹಕರಿಸುವಂತೆ ಅವರಿಗೂ ವಿನಂತಿಸುತ್ತೇನೆ. ಇದರಲ್ಲಿ ಏನು ಪರಿಹಾರ ಕಂಡುಕೊಳ್ಳಲು ಸಾಧವಿದೆಯೋ ಅದನ್ನು ನಾವು ನೀವು ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದು ಸಮಸ್ಯೆಯನ್ನು ಬಗೆಹರಿಸೋಣ.

ಶ್ರೀ ಎಸ್.ಎಸ್. ಪಾಟೀಲ್ :- ಕೆ.ಸಿ. ರೆಡ್ಡಿ ವರದಿ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ತಿಳಿಸಬೇಕು.

ಶ್ರೀ ಹಂಪನಗೌಡ ಬಾದರ್ಲಿ :- ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇವೊತ್ತು ತಾವು ಸಂಬಂಧಪಟ್ಟ ಶಾಸಕರ ಸಭೆಯನ್ನು ತಮ್ಮ ಕಛೇರಿಯಲ್ಲಿ ಕರೆದು ತೀರ್ಮಾನ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಎಸ್.ಎಸ್. ಪಾಟೀಲ್‌ರವರು ಕೇಳಿರುವ ವಿಚಾರದ ಬಗ್ಗೆ ಸ್ಪಷ್ಟಪಡಿಸುವುದೇನೆಂದರೆ ಶ್ರೀ ಕೆ.ಸಿ. ರೆಡ್ಡಿಯವರ ವರದಿ ಸರ್ಕಾರಕ್ಕೆ ಸೇರಿದೆ ಆದರ ಪರಿಶೀಲನೆ ನಡೆದಿದೆ.

ಹುಣಸೂರಿನ ಸಣ್ಣ ನೀರಾವರಿ ಉಪವಿಭಾಗದ ಸ್ಥಳಾಂತರ

143 (1913) - ಶ್ರೀ ಪಾಪಣ್ಣ ವಿ. (ಹುಣಸೂರು) : ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ಹುಣಸೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಅಚ್ಚುಕಟ್ಟು 35,000 ಎಕರೆ ಇರುವುದು ನಿಜವಲ್ಲವೆ ;

2. ಇಡೀ ರಾಜ್ಯದಲ್ಲಿ ಅತಿ ಹೆಚ್ಚಿನ ಅಚ್ಚುಕಟ್ಟು ಪ್ರದೇಶ ಇದ್ದರೂ ಇಲ್ಲಿನ ಉಪವಿಭಾಗ ಸ್ಥಳಾಂತರಿಸಲು ಕ್ರಮ ತೆಗೆದುಕೊಂಡಿರುವುದು ತಪ್ಪಲ್ಲವೇ ;

3. ಹುಣಸೂರಿನಲ್ಲಿ ಉಪ ವಿಭಾಗ ಉಳಿಸಲು ಕ್ರಮ ಕೈಗೊಳ್ಳುವಿರಾ ?

ಶ್ರೀ ಎಸ್. ಕುಮಾರಬಂಗಾರಪ್ಪ : (ಜಲ ಸಂಪನ್ಮೂಲ ರಾಜ್ಯ ಸಚಿವರು)

1. ಹೌದು

2. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಲಾಗಿತ್ತು.

3. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಿ. ಪಾಪಣ್ಣ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಮೂರನೇ ಪ್ರಶ್ನೆಯಾದ ಹುಣಸೂರಿನಲ್ಲಿ ಉಪ ವಿಭಾಗ ಉಳಿಸಲು ಕ್ರಮ ಕೈಗೊಳ್ಳುವಿರಾ ಎಂಬುದಕ್ಕೆ, ಇದು ಸರ್ಕಾರದ ಪರಿಶೀಲನೆಯಿಲ್ಲಿದೆಯೆಂದು ಹೇಳಿದ್ದಾರೆ. ಅವರೇ ಹೇಳಿದಂತೆ ರಾಜ್ಯದಲ್ಲಿ ಅತೀ ಹೆಚ್ಚು ಅಂದರೆ ಸುಮಾರು 35 ಸಾವಿರ ಎಕರೆ ಸಣ್ಣ ನೀರಾವರಿ ಅಚ್ಚುಕಟ್ಟು ಇರುವ ಪ್ರದೇಶ ಹುಣಸೂರು ಎಂದು ಒಪ್ಪಿಕೊಂಡಿದ್ದಾರೆ. ಆದರೂ ಇಲ್ಲಿರುವ ಉಪ ವಿಭಾಗವನ್ನು ತಾಂತ್ರಿಕ ಹಿತದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಲು ಮೈಸೂರಿಗೆ ತೆಗೆದುಕೊಳ್ಳಲಾಗಿತ್ತು ಎಂದೂ ಸಹ ಹೇಳುತ್ತಾರೆ. ಮತ್ತೆ ಇದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದರೆ ಮಾಡುತ್ತೇವೆ ಎಂಬ ಅರ್ಥ ಬರುತ್ತದೆ. ನಮ್ಮಲ್ಲೇನು 35 ಸಾವಿರ ಎಕರೆ ಸಣ್ಣ ನೀರಾವರಿ ಅಚ್ಚುಕಟ್ಟು ಇದೆ ಅದಕ್ಕೆ ಸಂಬಂಧಿಸಿದ ಕಛೇರಿ ಮೈಸೂರಿಗೆ ಏನಾದರೂ ಹೋದರೆ, ರೈತರು ನೀರನ್ನು ಬಿಡಿಸಿಕೊಳ್ಳಬೇಕಾದರೆ ಮೈಸೂರಿಗೆ ಹೋಗಬೇಕಾಗುತ್ತದೆ. ಮಾನ್ಯ ಮಂತ್ರಿಗಳು ದಯಮಾಡಿ ಯಾವುದೇ ಕಾರಣಕ್ಕೂ ಆ ಉಪ ವಿಭಾಗವನ್ನು ಮೈಸೂರಿಗೆ ವರ್ಗಾವಣೆ ಮಾಡಬಾರದೆಂದು ಮನವಿ ಮಾಡುತ್ತೇನೆ.

ಶ್ರೀ ಸಿ.ಬಿ. ಸುರೇಶ್ ಬಾಬು :- ಮಾನ್ಯ ಅಧ್ಯಕ್ಷರೇ, ನಮ್ಮ ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಸುಮಾರು 38 ಕೆರೆಗಳಿವೆ, ಮೂರು ಅಣೆಕಟ್ಟೆಗಳಿವೆ, ಅಚ್ಚುಕಟ್ಟು ಸುಮಾರು ಐದು ಸಾವಿರದ ನೂರ ಹದಿನೈದು ಎಕರೆ ಇದೆ. ಆದರೆ ಅಲ್ಲಿನ ಉಪ ವಿಭಾಗವನ್ನು ತಿಪಟೂರಿಗೆ